Motion to Consider.

Sri RAMAKRISHNA HEGDE.—I beg to move :

"That the Mysore Appropriation (No. 3) Bill, 1968, be taken into consideration."

Mr. SPEAKER.—Motion moved :

"That the Mysore Appropriation (No. 3) Bill, 1968, be taken into consideration."

Does the Finance Minister want to say anything ?

Sri RAMAKRISHNA HEGDE.—Nothing, Sir.

†ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಈ ಹಣ ವಿನಿಯೋಗದ ಮಸೂದೆಯ ಬಗ್ಗೆ ಹಣ ಹಣಕಾಸಿನ ಸಚಿವರು ಮಂಡಿಸುತ್ತಾ ಸುಮಾರು 14 ಕೋಟಿಯಷ್ಟು ಖರ್ಚು ಮಾಡಬೇಕು ಎಂದು ಮತ್ತು ಇನ್ನೂ ಬಹಳ ಕೆಲಸಕಾರ್ಯಗಳು ಉಳಿದಿವೆ ಎನ್ನುವುದನ್ನು ಹೇಳಿದರು. ದೇಶದಲ್ಲಿ ಇಂದಿನ ಆರ್ಥಿಕ ಸ್ಥಿತಿ ಹೇಗಿದೆ ಹಣ ಕಾಸಿನ ಮಂತ್ರಿಗಳ ಜವಾಬುದಾರಿಗಳು ಹೇಗಿವೆ ಅವರ ಜವಾಬುದಾರಿಯನ್ನು ಎಷ್ಟುವಷ್ಟಿಗೆ ಪರಿಣಾಮಕಾರಿಯಾಗಿ ನಡೆಸುತ್ತಿದ್ದಾರೆ ಎನ್ನುವ ಬಗ್ಗೆ ಕೆಲವಾರು ತೀವ್ರವಾದ ಟೀಕೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ನೀವು ಹಣ ಖರ್ಚು ಮಾಡಬೇಕಾಗಿಲ್ಲ ಎಂದು ನಾನು ಹೇಳುತ್ತಿಲ್ಲ. ಜನರ ಏಳಿಗೆಗಾಗಿ ಹೆಚ್ಚು ಖರ್ಚು ಮಾಡಿದರೆ ನಾನೂ ಬಹಳ ಸಂತೋಷಪಡುತ್ತೇನೆ. ಸುಮ್ಮನೆ ಇಲ್ಲಿ ಬಾಯಲ್ಲಿ 14 ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳುತ್ತಾ ಸ್ವಲ್ಪವಾಗಿ ಖರ್ಚು ಮಾಡಿದರೆ ಇದರಿಂದ ಈ ದೇಶದಲ್ಲಿ ಕ್ಷಾಮ ಪರಿಹಾರವಾಗುವುದಿಲ್ಲ ಮತ್ತು ದೇಶದ ಜನತೆಗೆ ಪರಿಹಾರ ನೀಡಿದಂತಾಗುವುದಿಲ್ಲ. ಮತ್ತು ಈ ದೇಶದಲ್ಲಿ ಬಂದಿರುವ ಕ್ಷಾಮದ ಪರಿಸ್ಥಿತಿಯನ್ನು ನಾವು ಧೈರ್ಯದಿಂದ ಎದುರಿಸುತ್ತೇವೆ ಎಂದು ಹೇಳಿದ್ದಾರೆ. ಸುಮ್ಮನೆ ಬರೀ ಬಾಯಲ್ಲಿ ಹೇಳುತ್ತ ಕಾರ್ಯದಲ್ಲಿ ಏನೂ ಆಗದೇ ಇದ್ದರೆ ಅದು ಸರಕಾರದ ಘನತೆಯನ್ನು ಎತ್ತಿ ತೋರಿಸುತ್ತದೆ. ಇಂತಹ ಬರಗಾಲದಲ್ಲಿ ಮೂರು ಹೊತ್ತು ಕಾರುಗಳನ್ನು ಕೊಳ್ಳುವ ಅವಶ್ಯಕತೆ ಯಾದರೂ ಏನಿತ್ತು ? ಇದಕ್ಕೆ ಸುಮಾರು 1.70 ಲಕ್ಷ ಬೇಕು ಎಂದು ಇಲ್ಲಿ ಕೇಳಿದ್ದಾರೆ. ನಾವು ಕಾರುಗಳು ಬೇಡ ಎಂದು ಹೇಳುತ್ತಿಲ್ಲ. ಇಂತಹ ಒಂದು ಭೋಗದ ಜೀವನ ನಿವ್ಯಾಕೆ ? ಇದರಿಂದ ದೇಶದ ಜನತೆಯ ಮೇಲೆ ಯಾವ ರೀತಿ ಪರಿಣಾಮ ಉಂಟಾಗುತ್ತದೆ ಎನ್ನುವುದನ್ನು ಗಮನದಲ್ಲಿ ಇಟ್ಟು ಕೊಂಡಂತಿಲ್ಲ. ನಾಯಲ್ಲಿ ಒಂದು ಹೇಳುವುದು ಕಾರ್ಯದಲ್ಲಿ ಒಂದು ಮಾಡುವುದು ಸರಿಯಲ್ಲ. ದೇಶದ ಜನ ಅನ್ನ ಇಲ್ಲ ಎಂದು ಹೇಳುತ್ತಿರುವಾಗ ದೇಶದ ಜನತೆಗೆ ಹೆಚ್ಚು ಅನ್ನ ಕೊಡಲು ಹೆಚ್ಚು ಹಣ ಬೇಕೆಂದು ಕೇಳಿದ್ದರೆ ನಾವು ನಿಮಗೆ ಶಹಬಾಸ್‌ಗಿರಿ ಕೊಡುತ್ತಿದ್ದೆವು. ಈಗಿನ ಕ್ಷಾಮ ನಿವಾರಣೆ ಕೆಲಸದಲ್ಲಿ ನೀವು ಅತಿ ಹೆಚ್ಚು ಹಣವನ್ನು ಕೇಳಿದ್ದರೆ ಅದರ ಬಗ್ಗೆ ಯಾವ ಆಂತಕವೂ ಇಲ್ಲದೆ ಕೊಡುತ್ತಿದ್ದೆವು. ನಾವು ಕೊಡತಕ್ಕ ಹಣವನ್ನು ಸರಿಯಾಗಿ ಖರ್ಚುಮಾಡದೇ ಅನ್ಯಾಯವಾಗಿ ಇತರರ ಪಾಲಾಗುತ್ತಿದೆ. ಇದರಿಂದ ನಾವು ಹೇಳುವುದು ನಿಮ್ಮಿಂದ ಖಂಡಿತ ಕ್ಷಾಮವನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲ. ಇಂತಹ ಒಂದು ಬರಗಾಲದ ಪ್ರಶ್ನೆ ಬಂದಾಗ ಸರಕಾರ ಇದರ ಕೆಲಸಗಳನ್ನು ಅಯಾ ತಾಲ್ಲೂಕು ಬೋರ್ಡುಗಳ ಹಾಗೂ ಪಂಚಾಯತಿಗಳ ಮೂಲಕ ಮಾಡಬೇಕೆಂದು ಹಣ ಕೊಡುತ್ತದೆ. ಆದರೆ ತಾವು ಕಳುಹಿಸುವ ಹಣ ಸಕಾಲದಲ್ಲಿ ಅವರಿಗೆ ಸೇರುವಂತೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಯಾರೇ ಆಗಲೀ ಈಗ ಚುನಾವಣೆ ದೃಷ್ಟಿಯಿಂದ ನೀವು ಕಳುಹಿಸುವ ಹಣವನ್ನು ಪೋಲುಮಾಡ ಬಾರದು. ಇದರಿಂದ ವೋಟು ಪಡೆಯಬೇಕು ಎಂದು ಏನೂ ಮಾಡಬಾರದು. ಇದಕ್ಕಾಗಿ ಕ್ಷಾಮ ದಂತಹ ಭೀಕರ ಪರಿಸ್ಥಿತಿಯನ್ನು ನೀವು ಧೈರ್ಯವಾಗಿ ಇನ್ನು ಎರಡು ತಿಂಗಳೊಳಗೆ ನಿವಾರಿಸ ಬೇಕೆಂದು ಒತ್ತಾಯ ಮಾಡುತ್ತೇನೆ. ಒಂಬತ್ತು ವರ್ಷಗಳಿಂದಲೂ ತಾಲ್ಲೂಕು ಬೋರ್ಡುಗಳ ಚುನಾವಣೆಯಾಗದೆ ಈಗ ತಾಲ್ಲೂಕು ಬೋರ್ಡುಗಳು ರದ್ದಾಗಿ ಬೇರೆ ಚುನಾವಣೆಗಳಾಗಿ ಮಾರ್ಪಾಡು ಆಗುವುದರಲ್ಲಿದೆ. ಆದುದರಿಂದ ರಿಲೀಫ್ ಕೆಲಸಗಳನ್ನು ಎಮರ್ಜೆನ್ಸಿ ಆಫೀಸರುಗಳು ಎಂದು ಮಾಡಿಕೊಂಡು ಅವರ ಮೂಲಕ ಮಾಡಿಸಿದರೆ ಜನತೆಗೆ ಸಂತಯ ಬರುವುದಿಲ್ಲ. ಇದಕ್ಕೆ ಅರಲ್ಲ, ಏಳಲ್ಲ, ಎಂಟು ಕೋಟಿಯಲ್ಲ, ಇಪ್ಪತ್ತು ಕೋಟಿ ಬೇಕಾದರೂ ಖರ್ಚು ಮಾಡಿ ಪರಿಣಾಮಕಾರಿಯಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮಾಡಬೇಕು ಎಂದು ಹೇಳುತ್ತೇನೆ.

(ಶ್ರೀ ಎಸ್. ಶಿವಪ್ಪ)

ನಮ್ಮಲ್ಲಿ ನೂರಕ್ಕೆ ಎಂಟರಷ್ಟು ಮಾತ್ರ ನೀರಾವರಿ ಸೌಲಭ್ಯವಿದ್ದು ಇಲ್ಲಿ ಈ ದಿವನ ಘೋರ ಕ್ಷಾಮ ಉಂಟಾಗಿದೆ. ನಮಗೆ ಕೇಂದ್ರದಿಂದ 20 ಕೋಟಿಯಲ್ಲ 50 ಕೋಟಿ ಕೊಟ್ಟರೂ ಸಾಲದು. ಆವ್ವರಿಂದ ಕೇಂದ್ರದಿಂದ ಹೆಚ್ಚಿನ ಧನಸಹಾಯವನ್ನು ಪಡಯಬೇಕೆಂದು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ನಮ್ಮಲ್ಲಿ ಈ ದಿವಸ ಅನೇಕ ನೀರಾವರಿ ಯೋಜನೆಗಳು ತಯಾರಾಗಿವೆ. ಹೇಮಾವತಿ ಆಣೆಕಟ್ಟಿಗೆ ಹಣ ಬೇಕು, ಅದರ ಕಾಲುವೆಯನ್ನು ತೆಗೆಯುವುದಕ್ಕೆ ಹಣ ಬೇಕು. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದರೂ ಸಾಲದಾಗಿದೆ. ಮೇಲಾಗಿ ದೇಶದಲ್ಲ ಒದಗಿರತಕ್ಕ ಕ್ಷಾಮದ ಸಂದರ್ಭದಲ್ಲ ಸಾವಿರಾರು ಜನಕ್ಕೆ ಕೆಲಸವನ್ನು ಒದಗಿಸುವುದಕ್ಕೂ ಕೂಡ ಇದರಿಂದ ಸಾಧ್ಯವಾಗುತ್ತದೆ. ಮತ್ತು ಕ್ಷಾಮ ಪರಿಹಾರ ಕಾಮಗಾರಿಯಲ್ಲಿ ಒಂದು ಶಾಶ್ವತವಾದ ಕೆಲಸವನ್ನು ನಡೆಸಿದಂತೆ ಆಗುತ್ತದೆ. ಇದೇ ರೀತಿ ಇಲ್ಲಿ ಎಲ್ಲೆಲ್ಲ ರೈಲ್ವೆ ಲೈನನ್ನು ಹಾಕಬೇಕು ಎಂಬುದನ್ನು ನೋಡಿ ಅಲ್ಲಿ ಈ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಪ್ರಯತ್ನಮಾಡಬೇಕು.

ಇನ್ನು ನಮ್ಮ ಕೈಗಾರಿಕೆಗಳಲ್ಲಿ ಹಾಕಿರತಕ್ಕ ಹಣ ಬಹಳವಾಗಿ ಕಮಿಷನ್ ಬಗ್ಗೆ ಹಾಗೂ ಕನ್‌ಸ್ಟ್ರಕ್ಷನ್ ಬಗ್ಗೆ ವ್ಯಯವಾಗುತ್ತಿದೆ. ಭದ್ರಾವತಿಯಲ್ಲ ಆ ಕನ್‌ಸೋರ್ಟಿಯಂಗೆ ಕಂಟ್ರಾಕ್ಟ್ ಕೊಟ್ಟು ಕೆಲಸ ಮಾಡುತ್ತಿರುವುದರಿಂದ ಬಹಳ ಹಣ ವ್ಯಯವಾಗುತ್ತಿದೆ. ಅಲ್ಲಿ ಕೆಲಸಮಾಡತಕ್ಕವರು ಯಾರೋ, ಕಟ್ಟಡಗಳನ್ನು ಕಟ್ಟತಕ್ಕವರು ಯಾರೋ, ಅದರೆ ಅದನ್ನು ಸೂಪರ್‌ವೈಜ್ ಮಾಡುವುದಕ್ಕೆ ಒಬ್ಬ ವ್ಯಕ್ತಿ 10ಕ್ಕೆ 2 ರಂತೆ ಕಮಿಷನ್ ಪಡೆದು ಅದರಲ್ಲೇ 25 ಲಕ್ಷ ರೂಪಾಯಿ ಕಮಿಷನ್ ತೆಗೆದು ಕೊಂಡಿದ್ದಾನೆ. ಅಲ್ಲವೆ ಆ ಕನ್‌ಸೋರ್ಟಿಯಂನಲ್ಲಿ ಒಬ್ಬ ವ್ಯಕ್ತಿಗೆ ತಿಂಗಳಿಗೆ 13 ಸಾವಿರ ರೂಪಾಯಿ ಸಂಬಳ. ಇದೇ ಹಂವೆಯೂ ಆ ಭದ್ರಾವತಿ ಕಾರ್ಖಾನೆಯಲ್ಲಿ ಜರ್ಮನ್ ಇಂಜಿನಿಯರುಗಳಿಗೆ ಮೆಕ್ಯಾನಿಕ್‌ಗಳಿಗೆ ತಿಂಗಳಿಗೆ 15 ಸಾವಿರ 20 ಸಾವಿರದಂತೆ ಸಂಬಳಗಳನ್ನು ಕೊಡಲಾಗುತ್ತಿತ್ತು. ಹಾಗಾಗಿ ಆ ಕೈಗಾರಿಕೆ ಬಹಳ ದಿವಸ ಮುಂದುವರಿಯುವುದಕ್ಕೆ ಸಾಧ್ಯವಾಗಲಲ್ಲ. ನಮ್ಮ ಉಕ್ಕಿಗಿಂತಲೂ ಶ್ರೇಷ್ಠವಾದ ಉಕ್ಕು ಕಡಮೆ ಬೆಲೆಗೆ ದೊರೆಯುತ್ತಿರುವುದರಿಂದ, ನಮ್ಮ ಉಕ್ಕಿಗೆ ಬೆಲೆ ಹೆಚ್ಚಾಗಿದ್ದು ಅದು ಗುಣದಲ್ಲಿ ಮಧ್ಯಮವಾಗಿರುವುದರಿಂದ ಇದಕ್ಕೆ ಗಿರಾಕಿಗಳು ದಿನ ದಿನಕ್ಕೂ ಕಡಮೆಯಾಗುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆಮಾಡತಕ್ಕದ್ದು ಏನೆಂದರೆ ಈ ಎಲ್ಲ ಸರ್ಕಾರಿ ಇಂಡಸ್ಟ್ರಿಯಲ್ ಅಂಡರ್‌ಟೇಕಿಂಗ್ ಬಗ್ಗೆ ಒಂದು ಸಮಿತಿಯನ್ನು ನೇಮಕಮಾಡಿ ತನ್ಮೂಲಕ ದುಂದುವೆಚ್ಚವನ್ನು ಕಡಮೆ ಮಾಡುವುದಕ್ಕೆ ಒಂದು ಅವಕಾಶಮಾಡಿಕೊಡಬೇಕು ಎಂದು. ಸರ್ಕಾರದವರು ಈ ಅಂಶವನ್ನು ತೀವ್ರವಾಗಿ ಪರಿಶೀಲಿಸಬೇಕೆಂದು ಹೇಳುತ್ತೇನೆ.

ಇನ್ನು ಕ್ಷಾಮದ ಬಗ್ಗೆ ಅದಷ್ಟೂ ಹೆಚ್ಚಿನ ಹಣವನ್ನು ಖರ್ಚುಮಾಡಬೇಕೆಂದು ಸೂಚನೆ ಮಾಡಬಯಸುತ್ತೇನೆ. ಅಲ್ಲಲ್ಲೆ ಹೆಚ್ಚು ಹೆಚ್ಚು ಗಂಜೀ ಕೇಂದ್ರಗಳನ್ನ ತೆರೆಯಬೇಕು. ಕನಿಷ್ಟಪಕ್ಷ 500 ಜನಗಳ ಒಂದು ಶ್ರೇಣಿಯಲ್ಲ ಇರುತ್ತದೋ ಅಲ್ಲೊಂದು ಗಂಜೀಕೇಂದ್ರವನ್ನು ತೆರೆಯಬೇಕು. ಹಾಗೇ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡಬೇಕು. ಸರ್ಕಾರದವರು ಅಲ್ಲಲ್ಲೆ ಬಡಜನಕ್ಕೆ ಗೋಧಿಯನ್ನು ಹಂಚತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದರಿಂದ ಬಡಜನಕ್ಕೆ ಪ್ರಯೋಜನವಿಲ್ಲ. ಕಾರಣ ಆ ಧಾನ್ಯ ಮಧ್ಯವರ್ತಿ ಜನರ ಕೈಸೇರುತ್ತದೆ. ಆದ್ದರಿಂದ ಅದನ್ನು ತಪ್ಪಿಸಿ ಗಂಜೀ ಕೇಂದ್ರಗಳನ್ನು ಹೆಚ್ಚಿಸಿ ಎಂದು ಸಲಹೆ ಮಾಡುತ್ತೇನೆ. ಅಂತೂ ಕ್ಷಾಮ ನಿವಾರಣೆಯ ದಿಕ್ಕಿನಲ್ಲಿ ಹೆಚ್ಚಿನ ಹಣವನ್ನು ಖರ್ಚುಮಾಡಿ ದೇಶದಲ್ಲಿರತಕ್ಕ ನಿರ್ಗತಿಕ ಜನಕ್ಕೆ ಜೀವನಕ್ಕೆ ಒಂದು ದಾರಿಯನ್ನು ಮಾಡಬೇಕೆಂದು ಸೂಚನೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಪೆಟ್ಟರ್.—ಮಾನ್ಯ ಸಭಾಧ್ಯಕ್ಷರೇ, ನಾನು ಕೇವಲ ಒಂದೇ ಒಂದು ವಿಷಯದ ಮೇಲೆ ಮಾತನಾಡಿ ನನ್ನ ಪುಟ್ಟ ಭಾಷಣವನ್ನು ಮುಗಿಸುತ್ತೇನೆ.

ಈ ರಾಜ್ಯದಲ್ಲ ಜನತೆ ಮತ್ತು ಜನತಾಮಂತ್ರಿಮಂಡಲ ಎಂದು ಎರಡು ವಿಭಾಗಗಳಿವೆ, ಈ ಇಬ್ಬರಲ್ಲ ಒಬ್ಬರನ್ನಾದರೂ ಸಂತೋಷಪಡಿಸುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆಮಾಡಿ ನೋಡಿದಾಗ ಈ ಜನತಾ ಮಂತ್ರಿಮಂಡಲಕ್ಕೆ ಇಷ್ಟೊಂದು ಕಾರುಗಳನ್ನು ಕೊಂಡನಂತರವೂ ದರೂ ಅವರಿಗಾದರೂ ಒಂದು ಸಮಾಧಾನ ಆಯ್ತು ಎಂದರೆ ಅದಾದರೂ ಒಂದು ಸಂತೋಷದ ವಿಷಯವೇ.

ಇನ್ನು ಡಿಮ್ಯಾಂಡ್ ನಂ. 39ರಲ್ಲ ಇಂಗ್ಲೆಂಡಿನಲ್ಲ ಲೋಕಮಾನ್ಯ ತಿಲಕರ ಸ್ಮಾರಕವೊಂದನ್ನು ಕಟ್ಟುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಆದರೆ ಆ ತಿಲಕರು ಹುಟ್ಟಿದ ಸ್ಥಳದಲ್ಲ ಅವರನ್ನು ಸ್ಮರಣೆಮಾಡಬೇಕಾದ್ದು ಮುಖ್ಯ. ಆ ಕಾರಣ ಇಲ್ಲಿಯೂ ಒಂದು ಸ್ಮಾರಕ ಕಟ್ಟಲಿಕ್ಕೆ ಅವಕಾಶಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಇದೇ ಡಿಮ್ಯಾಂಡಿನಲ್ಲ ಪೂರ್ವ ಪಾಕಿಸ್ತಾನದಿಂದ ಇಲ್ಲಿಗೆ ಬರತಕ್ಕ ನಿರಾಶ್ರಿತರ ಬಗ್ಗೆ ಕೇಂದ್ರ

ಸರ್ಕಾರದವರು 3 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅದಿಂಗೆ ಕ್ಯಳವನ್ನು ಕೊಡತಕ್ಕ ಬಗ್ಗೆ ಸಿಂಧನೂರು ತಾಲ್ಲೂಕಿನಲ್ಲಿ ಕೆಲವು ಭೂಮಿಯನ್ನು ಅಕ್ಯಯಿರ್ ಮಾಡಲಾಗುತ್ತಿದೆ ಎಂಬುದಾಗಿ ತಿಳಿಸಿದ್ದಾರೆ. ದೇಶದಲ್ಲಿ ಒಂದು ಕಡೆ ಕ್ಷಾಮದ ಹಾವಳಿ ಇದ್ದರೆ ಇನ್ನೊಂದು ಕಡೆ ನಿರಾಶ್ರಿತರ ಆಗಮನ. ಹೀಗಿರುವಾಗ ನಮ್ಮ ರಾಜ್ಯ ಸರ್ಕಾರದವರು ಇಲ್ಲಿ ಕೊಟ್ಟರತಕ್ಕ ಕೆಲವು ಡಿವ್ಯಾಂಡಿನಲ್ಲಿ ಅಳವಡಿಸಿರತಕ್ಕ ಖರ್ಚು ವೆಚ್ಚಗಳನ್ನು ಇನ್ನೂ ಕೆಲವು ಕಾಲ ಬದಿಗಿಡ ಬಹುದಾಗಿತ್ತು. ಇನ್ನು ನಮ್ಮ ವಿರೋಧ ಪಕ್ಷದ ನಾಯಕರು ಒಂದು ಫ್ಯಾಮಿನ್ ರಿಲೀಫ್ ಬೋರ್ಡನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಅದು ಬಹಳ ಒಳ್ಳೆಯ ಸೂಚನೆ. ಅದನ್ನು ಜಾರಿಗೆ ತಂದರೆ ಕೆಲವು ಜನರೇನು ಒಂದು ವಯಕ್ತಿಕ ಲಾಭಗಳಿಸುವುದು ಅಥವಾ ಒಂದು ತಮ್ಮ ಸ್ವಾರ್ಥಕ್ಕಾಗಿ ಕೆಲಸಮಾಡುವುದು ಇದ್ದವೋ ಅದೆಲ್ಲಾ ನಿಂತುಹೋಗುವುದಕ್ಕೆ ಅವಕಾಶ ವಾಗುತ್ತದೆ. ಇನ್ನು ಜನರಿಂದ ವಸೂಲ್ಮಾಡಿದ ಹಣದಿಂದ ಇ.ಎಸ್.ಐ. ಆಸ್ಪತ್ರೆಗಳನ್ನು ನಡೆಸ ರಾಗುತ್ತಿದೆ. ಅವುಗಳನ್ನು ಚೆನ್ನಾಗಿ ನಡೆಸಬೇಕು, ಎಂದು ಹೇಳಿ ನನ್ನ ಮಾತುಗಳನ್ನ ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಅಷ್ಟು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ವಿಷಯದಲ್ಲಿ ಮಾತ್ರ ಕೆಲವೊಂದು ಮಾತುಗಳನ್ನು ಹೇಳಬೇಕಾದ್ದು ಅಗತ್ಯ ಎಂದು ಭಾವಿಸುತ್ತೇನೆ.

ವಿರೋಧ ಪಕ್ಷದ ಮಾನ್ಯ ಶಿವಪ್ಪನವರು ಕೈಗಾರಿಕೆಗಳ ಬಗ್ಗೆ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ಕುರಿತು ನಮ್ಮ ಉದ್ಯಮಗಳ ಬಗ್ಗೆ ಒಂದು ನಮಿತಿಯನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ.

5-00 P.M.

ಆ ವಿಚಾರ ಸರ್ಕಾರದ ಮನಸ್ಸಿನಲ್ಲೂ ಇತ್ತು ಮತ್ತು ಆ ವಿಚಾರದಲ್ಲಿ ಹಿಂದಿನ ಸಭೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದೆ. ಸರ್ಕಾರಿ ಉದ್ಯಮಗಳ ವಿಚಾರದಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡುವಂತಹ ಅಧಿಕಾರ ಎಸ್ಟಿಮೇಟ್ ಕಮಿಟಿಗೆ ಇದೆ. ಈ ವಿಚಾರ ಅವರಿಗೆ ಗೊತ್ತಾದ ಕೂಡಲೆ ಎಸ್ಟಿಮೇಟ್ ಕಮಿಟಿ ಅಧ್ಯಕ್ಷರು ಒಂದು ಪತ್ರ ಬರೆದರು, ಈ ರೀತಿ ಪ್ರಸ್ತಾಸ ಮಾಡಿದ್ದಾರೆ. ಇದು ನಮ್ಮ ಕಕ್ಷೆಯಲ್ಲಿರತಕ್ಕ ಅಧಿಕಾರ ಆಗುತ್ತದೆ. ಇದಕ್ಕೆ ನಮ್ಮ ಒಪ್ಪಿಗೆ ಇಲ್ಲ ಎಂದರು, ಮೊದಲೇ ಆ ವಿಚಾರವನ್ನ ಕೂಡ ತಮಗೆ ತಿಳಿಸಿದ್ದೇನೆ, ಅದ್ದರಿಂದ ಸದ್ಯಕ್ಕೆ ಅದನ್ನು ಮಾಡುವ ಹಾಗಿಲ್ಲ.

ಇನ್ನು ಕ್ಷಾಮ ನಿವಾರಣೆ, ಪರಿಹಾರ ಕಾಂಗಾರಿ ವಿಚಾರದಲ್ಲಿ ಶ್ರೀಮಾನ್ ಶಿವಪ್ಪನವರು ತಾಲ್ಲೂಕುಬೋರ್ಡಿಗೆ ಅಧಿಕಾರ ಕೊಡುವುದು ಚೆನ್ನಾಗಿಲ್ಲ, ಅದನ್ನು ರದ್ದುಮಾಡಿ ಅಧಿಕಾರಿಗಳ ಮುಖಾಂತರ ಕೆಲಸ ಮಾಡಬೇಕೆಂದು ಹೇಳಿದರು. ಈ ಕೆಲಸವನ್ನು ಸಂಪೂರ್ಣವಾಗಿ ಅಧಿಕಾರಿಗಳ ಮುಖಾಂತರ ಮಾಡಿಸುವುದು ಅಷ್ಟೊಂದು ಸೂಕ್ತವಲ್ಲ. ತಾಲ್ಲೂಕು ಬೋರ್ಡು ಅಧ್ಯಕ್ಷರು ಯಾವುದೇ ಪಕ್ಷದವರು ಇರಬಹುದು, ಆದರೆ ಇಂತಹ ಸಂದರ್ಭದಲ್ಲಿ ಅವರು ಕಾರ್ಯಕರ್ತರಲ್ಲಿಯಿಂದ, ಜನತೆಯ ಹಿತದೃಷ್ಟಿಯಿರಿದ ಕೆಲಸ ಮಾಡುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ. ಅವರಲ್ಲಿ ವಿಶ್ವಾಸ ಇಡುವುದರಲ್ಲಿ ತಪ್ಪಿಲ್ಲ; ಮತ್ತು ಅಧಿಕಾರಿಗಳೂ ಕೂಡ ಮೇಲ್ವಿಚಾರಣೆ ಮಾಡಲಿಕ್ಕೆ ಇದ್ದಾರೆ, ಆದರಿಂದ ಈ ಎರಡೂ ಏಜೆನ್ಸಿಯ ಸಹಕಾರದಿಂದ ಹೆಚ್ಚು ಉತ್ತಮವಾಗಿ ಕೆಲಸ ಮಾಡಲು ಪ್ರಯತ್ನ ಮಾಡುತ್ತೇವೆ.

Mr. SPEAKER.—The question is :

"That the Mysore Appropriation (No. 3) Bill, 1968, be taken into consideration."

The motion was adopted.

CLAUSES 2 AND 3

Mr. SPEAKER.—The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is :

"That the Schedule stand part of the Bill."

The motion was adopted.

The Schedule was added to the Bill.

CLAUSE 1, ETC.

Mr. SPEAKER.—The question is :

"That Clause 1, The Title and the Preamble stand part of the Bill"

The motion was adopted.

Clause 1, The Title and the Preamble were added to the Bill.

Motion to pass

Sri RAMAKRISHNA HEGDE.—Sir, I beg to move :

"That the Mysore Appropriation (No. 3) Bill, 1968, be passed."

Mr. SPEAKER.—The question is :

"That the Mysore Appropriation (No. 3) Bill, 1968, be passed."

The motion was adopted.

STATEMENT OF THE CHIEF MINISTER *re*: ASSETS AND LIABILITIES OF THE Ex-MINISTER, Etc.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಈ ಸಭೆಯಲ್ಲಿ ಮಾನ್ಯ ಸದಸ್ಯರು ನಮ್ಮ ಕೆಲವು ಮಿತ್ರರಿಂದ ಅವರ ಅಸೆಟ್ಸ್ ಮತ್ತು ಲೈಯಬಿಲಿಟೀಸ್ ಸ್ಟೇಟ್‌ಮೆಂಟ್‌ನ್ನು ನನಗಿಂತಲೂ ಪೂರ್ವದಲ್ಲೂ ಇದ್ದಂತಹ ಮುಖ್ಯಮಂತ್ರಿಗಳು ಕೇಳಬೇಕೆಂದು ಹೇಳಿದರು. ಆ ರೀತಿ ಏನೊಂದು ನಿರ್ಣಯವಾಗಿತ್ತು ಅದರ ಪ್ರಕಾರ ಮಾಜಿ ಮಂತ್ರಿಗಳು ಮತ್ತು ಯಾವುದೇ ಅಧಿಕಾರದಲ್ಲಿ 1947ರಿಂದ ಈಚೆಗೆ ಇದ್ದವರು ಎಲ್ಲರಿಂದ ಸ್ಟೇಟ್‌ಮೆಂಟ್ ಆಫ್ ಅಸೆಟ್ಸ್ ಅಂಡ್ ಲೈಯಬಿಲಿಟೀಸ್ ಕೇಳಿದ್ದೆವು. ಆ ಪ್ರಕಾರ, ಯಾರು ಒಪ್ಪಿಸಿದ್ದಾರೆ ಯಾರು ಇನ್ನೂವರೆಗೂ ಒಪ್ಪಿಸಿಲ್ಲ, ಯಾರು ಒಪ್ಪಿಸುವುದಕ್ಕೆ ನಿರಾಕರಿಸಿದ್ದಾರೆ ಎಂಬ ಒಂದು ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದೆ ಇಡುತ್ತೇನೆ ಎಂದು ಹೇಳಿದ್ದೆ. ಸ್ಟೇಟ್‌ಮೆಂಟನ್ನು ತಯಾರು ಮಾಡಿದ್ದೇನೆ, ಅದನ್ನು ಸಭೆಯ ಮುಂದೆ ಇಟ್ಟಿದ್ದೇನೆ.*

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಅದರ ಪ್ರತಿಯೊಂದನ್ನು ನಮಗೆ ಓದಗಿಸಿಕೊಡಿ ಸ್ವಾಮಿ.

Mr. SPEAKER.—It is for me I shall do it. Now the Statement is permitted to be laid on the Table of the House.

---

* Copy placed in the Mysore Legislature Library *Vide* No. 19 dated 18th September 1968.